# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು

## ಮಲ್ಲೇಶ್ವರಂ, 6ನೇ ಅಡ್ಡ ರಸ್ತೆ, ಬೆಂಗಳೂರು-3

ಸಂಖ್ಯೆ: ವೈ2(ಇ.ಪ)ಕಾ.ಖ.ಬ/53/2021-22. ದಿನಾಂಕ: 08.04.2022.

## ದರಪಟ್ಟಿ ಆಹ್ವಾನ ಪತ್ರ

**ವಿಷಯ:-** ಇತರೆ ಪರೀಕ್ಷೆಗಳ ವಿಭಾಗದಲ್ಲಿ ಪ್ರಸ್ತುತ ಬಳಕೆಯಲ್ಲಿರುವ ಪ್ರಿಂಟರ್‌ಗಳಿಗೆ ಕಾಟ್ರಿಡ್ಜ್‌ಗಳನ್ನು ಖರೀದಿಸುವ ಸಂಬಂಧ ದರಪಟ್ಟಿಯನ್ನು ಆಹ್ವಾನಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಇತರೆ ಪರೀಕ್ಷೆಗಳ ವಿಭಾಗದಲ್ಲಿ ಬಳಕೆಯಲ್ಲಿರುವ ಪ್ರಿಂಟರ್‌ಗಳಿಗೆ ಅಗತ್ಯವಿರುವ ಕಾಟ್ರಿಡ್‌ಗಳನ್ನು ಖರೀದಿಸುವ ಕುರಿತು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ. ಸಂಸ್ಥೆಗಳು ಕಾಟ್ರಿಡ್ಜ್‌ಗಳಿಗೆ ತಗಲುವ ಮೊತ್ತಕ್ಕೆ ಜಿ.ಎಸ್.ಟಿ ಸೇರಿಸಿ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 21-04-2022 ರಂದು ಸಂಜೆ 4 ಗಂಟೆಯೊಳಗೆ, ನಿರ್ದೇಶಕರು,(ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03 ಈ ವಿಳಾಸಕ್ಕೆ ಮುದ್ದಾಂ/ಅಂಚೆ ಮೂಲಕ ತಲುಪಿಸಲು ತಿಳಿಸಿದೆ.

| ಕ್ರ ಸಂ | ಪ್ರಿಂಟರ್‌ನ ಹೆಸರು | ಕಾಟ್ರಿಡ್ಜ್ | ಪ್ರಮಾಣ |
|---|---|---|---|
| 1 | TOSHIBA e-STUDIO2508A | T-3008P | **03** |
| 2 | HP LASER JET Pro | MFP M435 | **04** |
| 3 | CANON ir2006/2206 UFRII LT | NPG-59 | **05** |
| 4 | TOSHIBA K181034111C | T-2507P | **03** |
| 5 | HP LASER JET Pro M429f | CF277A | **02** |

**ಷರತ್ತುಗಳು:**

1. ಎಲ್ಲಾ ತೆರಿಗೆ ಸೇರಿದಂತೆ ದರಗಳನ್ನು ನಮೂದಿಸುವುದು ಒಟ್ಟಾರೆ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಮಾತ್ರ ಪರಿಗಣಿಸಲಾಗುವುದು.
2. ಸರಬರಾಜು ಮಾಡುವ ಕಾಟ್ರಿಡ್ಜ್‌ಗಳು ಉತ್ತಮ ಕಂಪನಿಯದ್ದಾಗಿರಬೇಕು. ಕಳಪೆ ಗುಣಮಟ್ಟದ್ದಾಗಿದ್ದಲ್ಲಿ ತಿರಸ್ಕರಿಸಲಾಗುವುದು ಮತ್ತು ಈ ಕಾರ್ಯಕ್ಕೆ ಮಂಡಳಿಯಿಂದ ಯಾವುದೇ ಮುಂಗಡ ನೀಡಲಾಗುವುದಿಲ್ಲ.
3. ಸಂಸ್ಥೆಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಗಳನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ಮಾನ್ಯ ನಿರ್ದೇಶಕರು (ಇತರೆ ಪರೀಕ್ಷೆಗಳು) ರವರದ್ದಾಗಿರುತ್ತದೆ.
4. ಅತಿ ಕಡಿಮೆ ದರ ಸೂಚಿಸಿ ಆಯ್ಕೆಯಾಗುವ ಸಂಸ್ಥೆಗೆ ನೀಡಲಾಗುವ ಕಾರ್ಯದೇಶದಲ್ಲಿ ಸೂಚಿಸುವ ದಿನಾಂಕದೊಳಗೆ ಪೂರೈಸುವುದು. ವಿಳಂಬವಾದಲ್ಲಿ ದಿನಕ್ಕೆ ರೂ.250/- ರಂತೆ ದಂಡವನ್ನು ಬಿಲ್ಲಿನ ಮೊತ್ತದಲ್ಲಿ ಕಟಾಯಿಸಲಾಗುವುದು.
5. ದರಪಟ್ಟಿ ಲಕೋಟೆಯ ಮೇಲೆ ಕಡ್ಡಾಯವಾಗಿ **"ಕಾಟ್ರಿಡ್ಜ್‌ಗಳ ಖರೀದಿಗೆ ಸಂಬಂಧಿಸಿದ ದರಪಟ್ಟಿ"** ಎಂದು ನಮೂದಿಸುವುದು.
6. ಕಾರ್ಯಾದೇಶದಲ್ಲಿ ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ 2% ಟಿ.ಡಿ.ಎಸ್ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.
7. ಈ ಕಾರ್ಯದ ಸಂಬಂಧ ಯಾವುದೇ ಸಾಗಾಣಿಕೆ ವೆಚ್ಚವನ್ನು ಮಂಡಳಿವತಿಯಿಂದ ಪಾವತಿಸಲಾಗುವುದಿಲ್ಲ.
8. ದರಪಟ್ಟಿ ಸಲ್ಲಿಸುವ ಸಂಸ್ಥೆಯು ನಿಯಮಾನುಸಾರ ನೊಂದಣಿಯಾಗಿದ್ದು, ಎಸ್.ಜಿ.ಎಸ್.ಟಿ ಮತ್ತು ಸಿ.ಜಿ.ಎಸ್.ಟಿ ಸಂಖ್ಯೆ ಹೊಂದಿರಬೇಕು.

ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿ : ಕಚೇರಿಯ ಸೂಚನಾ ಫಲಕಕ್ಕೆ.